13

ಕರ್ನಾಟಕ ಸರ್ಕಾರ

## ಲೋಕೋಪಯೋಗಿ ಇಲಾಖೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಉಪ-ವಿಭಾಗ, ಕೂಡ್ಲಿಗಿ**

Email: aeepedkdl666@gmail.com

ಕ್ರ.ಸಂ: ಸಕಾಅ/ಲೋಇ/ಉವಿ/ಕೂ/ಶಾ.ಸು.ಪ್ರ.ಪ/2025-26/325 ದಿನಾಂಕ: 27/06/2025

**ಇವರಿಗೆ**

ಪ್ರಾಂಶುಪಾಲರು,
ದೆಲ್ಲಿ ವರ್ಲ್ಡ್ ಸ್ಕೂಲ್,
ಹಗರಿಬೊಮ್ಮನಹಳ್ಳಿ ರಸ್ತೆ, ಕೊಟ್ಟೂರು,
ವಿಜಯನಗರ ಜಿಲ್ಲೆ-583135

ಮಾನ್ಯರೇ,

**ವಿಷಯ:-** ಶಾಲಾ ಕಟ್ಟಡದ Structural Stability ಮತ್ತು ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಕುರಿತು.

**ಉಲ್ಲೇಖ:-** 1) ಕರ್ನಾಟಕ ಸರ್ಕಾರದ ಸಚಿವಾಲಯ ವಿಕಾಸ ಸೌಧ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಲೋ.ಇ 59 ಬಿಇಡಿ 2019 ದಿನಾಂಕ: 06/05/2023

2) ಕರ್ನಾಟಕ ಸರ್ಕಾರದ ಸಚಿವಾಲಯ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಇ.ಡಿ 43 ಪಿಜಿಸಿ 2022ದಿನಾಂಕ: 18/05/2023

3) ತಮ್ಮ ಕಛೇರಿ ಪತ್ರ ದಿನಾಂಕ : 17/06/2025

** ** ** ** **

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ(1) ಹಾಗೂ (2)ರ ಸುತ್ತೋಲೆಯಂತೆ ಶಾಲಾ ಕಟ್ಟಡಗಳ ನಿರಾಪೇಕ್ಷಣಾ ಪ್ರಮಾಣ ಪತ್ರವನ್ನು ನೀಡಲು ಈ ಕಛೇರಿಗೆ ಅಧಿಕಾರವನ್ನು ನೀಡಿರುತ್ತಾರೆ. ಅದರನ್ವಯ ವಿಜಯನಗರ ಜಿಲ್ಲೆ, ಕೊಟ್ಟೂರು ತಾಲೂಕಿನ, ಕೊಟ್ಟೂರು ಪಟ್ಟಣದ ದೆಲ್ಲಿ ವರ್ಲ್ಡ್ ಶಾಲೆ, ಕಟ್ಟಡದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಲು ಕೋರಿರುತ್ತೀರಿ.

ಅದರಂತೆ ದಿನಾಂಕ: 26/06/2025 ರಂದು ಶ್ರೀ.ದೊಡ್ಡಮನಿ ಕೊಟ್ರೇಶ್ ಇವರು ಕೊಟ್ಟೂರು ತಾಲೂಕಿನ, ಕೊಟ್ಟೂರು ಪಟ್ಟಣದ ದೆಲ್ಲಿ ವರ್ಲ್ಡ್ ಶಾಲೆ, ಕಟ್ಟಡವನ್ನು ಪರಿಶೀಲಿಸಿ ಶಾಲೆಯು ಆರ್.ಸಿ.ಸಿ ಮೇಲ್ಛಾವಣಿ ಹೊಂದಿದ್ದು, ಕಟ್ಟಡವು ಮೇಲುನೋಟಕ್ಕೆ ಸುರಕ್ಷಿತವಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ. ಅದಕಾರಣ ಉಲ್ಲೇಖಿತ(1) ಹಾಗೂ (2) ಸರ್ಕಾರದ ಸುತ್ತೋಲೆ ಅನ್ವಯ ಸದರಿ ಶಾಲೆಯಿಂದ ಪರಿಶೀಲನಾ ಶುಲ್ಕವನ್ನು ಸರ್ಕಾರಕ್ಕೆ ಖಜಾನೆ-2 ಚಲನ್ ಸಂಖ್ಯೆ: ಜೆ-185134332 ರಲ್ಲಿ ದಿನಾಂಕ: 25/06/2025 ರಂದು ಸರ್ಕಾರಕ್ಕೆ ರೂ, 5000/-(ಐದು ಸಾವಿರ)ಗಳನ್ನು ಪಾವತಿ ಮಾಡಿರುತ್ತಾರೆ. ಹಾಗೂ ಸದರಿ ದೆಲ್ಲಿ ವರ್ಲ್ಡ್ ಶಾಲಾ ಕಟ್ಟಡವು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಯೋಗ್ಯವಾಗಿರುತ್ತದೆ ಎಂದು ದೃಢೀಕರಿಸಲಾಗಿದೆ.

ಗಮನಿಸಿ: ನೆಲಮಹಡಿ, ಮೊದಲಮಹಡಿ, ಎರಡನೇಮಹಡಿ.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಉಪ-ವಿಭಾಗ, ಕೂಡ್ಲಿಗಿ.